

ದಕ್ಷಿಣ ಭಾರತ ಸಭೆ – ಕರ್ನಾಟಕ ಮಧ್ಯ ಸಭಾಪ್ರಾಂತ

ಯೇಸು ಕೃಪಾಲಯ

ರಾಜಾಜಿನಗರ, ಬೆಂಗಳೂರು – 560 010.



ಹಿರಿಯ ನಾಗರೀಕರ ಭಾನುವಾರ

29–09–2019ನೇ ಭಾನುವಾರ

ಬೆಳಿಗ್ಗೆ 8.30ಕ್ಕೆ

ಮುಖ್ಯ ಪ್ರಸ್ತಾಪ :
"ಹಿರಿಯರನ್ನು ಒಪ್ಪಿಕೊಂಡು ಅವರ ಬಗ್ಗೆ ಚಿಂತನೆಯುಳ್ಳವರಾಗುವುದು"

ಪಾಲಕ : 'ತಲೆನೆರೆತ ವೃದ್ಧರ ಮುಂದೆ ಎದ್ದು ನಿಂತು ಅವರನ್ನು ಸನ್ಮಾನಿಸಬೇಕು. ನಿಮ್ಮ ದೇಹದಲ್ಲಿ ಭಯಭಕ್ತಿಯುಳ್ಳವರಾಗಿರಬೇಕು : ನಾನು ಯೆಹೋವನು.' (ಯಾಜಕಕಾಂಡ 19:32)

"ನನ್ನ ಮಗನೇ, ನಿನ್ನ ಮುಪ್ಪಿನ ತಂದೆಗೆ ಸಹಾಯಕನಾಗಿರು. ಅವರು ಬದುಕಿರುವವರೆಗೂ ಅವರ ಮನಸ್ಸನ್ನು ನೋಯಿಸಬೇಡ. ಅವರ ಬುದ್ದಿ ಶಿಥಿಲವಾದರೂ ಅವರೊಂದಿಗೆ ತಾಳ್ಮೆಯಿಂದ ನಡಕೋ. ನೀನು ಪೂರ್ಣ ಬಲವಂತನಾಗಿರುವಾಗ ಅವರನ್ನು ಹೀನೈಸಬೇಡ. ಯಾಕಂದರೆ ತಂದೆಗೆ ಮಾಡಿದ ಉಪಶಮನವು ಮರೆತುಹೋಗುವುದಿಲ್ಲ. ಪಾಪದ ಬದಲಾಗಿ ಅದು ನಿಂತು ನಿನ್ನನ್ನು ಅಭಿವೃದ್ದಿಪಡಿಸುತ್ತದೆ. ನೀನು ಕಷ್ಟಕ್ಕೆ ಗುರಿಯಾದ ಕಾಲದಲ್ಲಿ ಅದು ನೆನಪಿಗೆ ತರಲ್ಪಡುತ್ತದೆ. ಬೆಳಗ್ಗೆ ಮಂಜು ಕರಗಿಹೋಗುವಂತೆ ನಿನ್ನ ಪಾಪಗಳೆಲ್ಲ ಕರಗಿಹೋಗುವವು. ತನ್ನ ತಂದೆಯನ್ನು ಕೈಬಿಡುವವನು ದೇವದೂಷಕನಂತಿದ್ದಾನೆ. ತನ್ನ ತಾಯಿಯ ಸಿಟ್ಟನ್ನು ಕೆರಳಿಸುವವನು ದೇವರಿಂದ ಶಾಪಗ್ರಸ್ತನು." (ಯೆಷೂವನ ಜ್ಞಾನಾಮೃತವು3:8,12,16 ಅಪೊಕ್ರಿಪಗ್ರಂಥ)

ಪ್ರಿಯರೇ, ಬದಲಾಗುತ್ತಿರುವ ಕಾಲ ಹಾಗೂ ಸಾಮಾಜಿಕ ಮೌಲ್ಯಗಳಿಗೆ ಅನುಸಾರವಾಗಿ ನಮ್ಮ ಸಮಾಜವು ಬದಲಾಗುತ್ತಿದೆ. ಅದಕ್ಕನುಗುಣವಾಗಿ ಸಂಬಂಧಗಳು ಪದ್ದತಿಗಳು ಬದಲಾಗುತ್ತಿವೆ. ಸಮುದಾಯ ಕೇಂದ್ರಿತವಾಗಿದ್ದ ಜೀವನಕ್ರಮ ಸ್ವಾರ್ಥಮಯ ಕೇಂದ್ರಗಳಾಗಿ ಇಂದು ಮಾರ್ಪಡುತ್ತಿದೆ. ವಿಸ್ತರಿತ ಕುಟುಂಬದಲ್ಲಿದ್ದ ಪ್ರೀತಿ ಮತ್ತು ಕಾಳಜಿ ಮಾಯವಾಗಿ ಅವಿಭಕ್ತ ಕುಟುಂಬಗಳಿಗೆ ಜನರು ಪ್ರಾಶಸ್ತ್ಯಕೊಡುತ್ತಿದ್ದಾರೆ. ಈ ಪರಿಕಲ್ಪನೆ ಕೌಟುಂಬಿಕ ಪರಿಧಿಯೊಳಗೆ ಅನೇಕ ಸಮಸ್ಯೆಗಳ ಉಗಮಕ್ಕೆ ಎಡೆಮಾಡಿಕೊಟ್ಟಿದೆ. ತಮ್ಮ ಅನುಭವ, ಆಲೋಚನೆ, ಜ್ಞಾನಕ್ಕೆದ್ಯೋತಕವಾಗಿದ್ದ ಹಿರಿಯರು ಈಗ ಕುಟುಂಬಗಳಲ್ಲಿ ಹೊರೆಯಾಗಿದ್ದಾರೆಂದು ಭಾವಿಸಲಾಗುತ್ತಿದೆ. ಕುಟುಂಬದ ಆಶೀರ್ವಾದ ಮತ್ತು ಆಸ್ತಿಯೆಂದು ಪರಿಗಣಿಸಲ್ಪಟ್ಟಿದ್ದ ಹಿರಿಯರು ಇಂದು ಬೇಡದವರಾಗಿ ಪ್ರೀತಿಯಿಂದ ವಂಚಿಸಲ್ಪಟ್ಟಿದ್ದಾರೆ.

ಈ ನಿಟ್ಟಿನಲ್ಲಿ ಈ ರೀತಿಯ ಮನೋಭಾವನೆಗಳಿಂದ ಹೊರಬಂದು ಹಿರಿಯರ ಕಡೆಗೆ ಸಂಬಂಧಗಳನ್ನು ಮರು ಸ್ಥಾಪಿಸಲು ಮರು ಚಿಂತನೆ ನಡೆಸಿ, ನಮ್ಮ ಆದ್ಯತೆಗಳನ್ನು ಪರಿಶೀಲಿಸುವ ಅಗತ್ಯತೆ ಇದೆ. ಆದುದರಿಂದ ನಾವು ನಮ್ಮ ದೇವರ ವಾಕ್ಯದ ಕಡೆಗೂ ಹಿಂದೆ ನಮ್ಮಲ್ಲಿ ಇದ್ದ ಮೌಲ್ಯಗಳ ಕಡೆಗೂ ದೃಷ್ಟಿಹರಿಸಿ ಸಂಬಂಧಗಳನ್ನು ಪುನಃ ಕಟ್ಟುವ ಕಾರ್ಯದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವ ಮೂಲಕ ಪ್ರೀತಿಸುವ, ಜೀವಿಸುವ ಸಮುದಾಯ ಮತ್ತು ಕುಟುಂಬಗಳಾಗಿ ನಾವು ಬಾಳಬಹುದು.

ಆರಾಧನೆಗೆ ಕರೆ :

ಪಾಲಕ : ಬನ್ನಿರಿ, ಪರಿಶುದ್ಧತ್ವವೆಂಬ ಭೂಷಣದೊಡನೆ ಕರ್ತನನ್ನು ಆರಾಧಿಸೋಣ, ಹರ್ಷ ಧ್ವನಿಮಾಡುತ್ತಾ

ಕರ್ತನನ್ನು ಆರಾಧಿಸೋಣ. ನಮ್ಮನ್ನು ಸಾಮಾಜಿಕ ಜೀವಿಗಳನ್ನಾಗಿ ಸಮುದಾಯಗಳಲ್ಲಿ ಜೀವಿಸಲು ಶಕ್ತರನ್ನಾಗಿಸಿದ ಕರ್ತನನ್ನು ಆರಾಧಿಸೋಣ. ನಮ್ಮನ್ನು ಕುಟುಂಬಗಳೊಂದಿಗೆ ಆಶೀರ್ವದಿಸಿ ತಂದೆ ತಾಯಿಗಳು, ಹಿರಿಯರು, ಮಕ್ಕಳು ಹಾಗೂ ಯೌವನಸ್ಥರೊಂದಿಗೆ ಹಂಚಿಕೊಳ್ಳಲು ಮತ್ತು ಕಾಳಜಿ ವಹಿಸಲು ಅವಕಾಶವನ್ನಿತ್ತ ದೇವರನ್ನು. ಆರಾಧಿಸೋಣ. ಈ ಲೋಕದಲ್ಲಿ ಮಾನವನಾಗಿ ಬಂದು ತಾನು ಶಿಲುಬೆಯಲ್ಲಿ ಶ್ರಮೆಯನ್ನು ಅನುಭವಿಸುತ್ತಿರುವಾಗಲೂ ತನ್ನ ತಾಯಿಯ ಪರಾಂಬರಿಕೆಯ ಜವಾಬ್ದಾರಿಯನ್ನು ಶಿಷ್ಯನಿಗೆ ಕೈವರ್ತಿಸಿಕೊಟ್ಟು ಹಿರಿಯರನ್ನು ಪರಾಂಬರಿಸುವ ಮಾದರಿ ತೋರಿದ ಕರ್ತನನ್ನು ಆರಾಧಿಸೋಣ. ಆಮೆನ್

ಸಂಗೀತ : 41

ಕೃತಜ್ಞತಾಸ್ತುತಿಪ್ರಾರ್ಥನೆ : ಹಿರಿಯರೊಬ್ಬರಿಂದ

ದಯಾಪೂರ್ಣ ಕರ್ತನೇ, ಜೀವನವನ್ನು ಉಡುಗೊರೆಯಾಗಿ ಕೊಟ್ಟಿರುವುದಕ್ಕಾಗಿ ನಿನಗೆ ಕೃತಜ್ಞತಾಸ್ತುತಿ ಸಲ್ಲಿಸುತ್ತೇವೆ. ನಮ್ಮ ಮೇಲೆ ಸುರಿಸಿರುವ ಆಶೀರ್ವಾದಕ್ಕಾಗಿ ಹಾಗೂ ನಮ್ಮ ಜೀವನದ ಯಾತ್ರೆಯಲ್ಲಿ ಹೊಂದಿರುವ ನಿನ್ನ ಕರುಣೆಗಾಗಿ ನಿನಗೆ ಸ್ತೋತ್ರವನ್ನು ಸಲ್ಲಿಸುತ್ತೇವೆ.

ನಮ್ಮ ಜೀವನದ ಯೌವ್ವನದ ಕಾಲವನ್ನು ಸಂತೋಷದಿಂದ ನೆನೆಸಿಕೊಳ್ಳುತ್ತೇವೆ; ನಮ್ಮ ಕುಟುಂಬದೊಂದಿಗೂ ಸ್ನೇಹಿತರೊಂದಿಗೂ ಕಳೆದ ಸಂತೋಷದ ಸಮಯಗಳಿಗಾಗಿ, ನಮ್ಮ ಕೆಲಸದ ಸ್ಥಳಗಳಲ್ಲಿ ಮತ್ತು ಕೆಲಸಗಳಲ್ಲಿ ನಾವು ಅನುಭವಿಸಿದ ಅನ್ಯೋನ್ಯತೆಗಾಗಿ ನಿನಗೆ ಸ್ತೋತ್ರವನ್ನುಸಲ್ಲಿಸುತ್ತೇವೆ.

ನಮ್ಮ ಜೀವನದ ಸಾಹಸಗಳಲ್ಲಿ, ಚಟುವಟಿಕೆಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳಲು ನೀನು ಕೊಟ್ಟಿರುವ ಆರೋಗ್ಯ ಮತ್ತು ಶಕ್ತಿಗಾಗಿ, ಆ ಮೂಲಕ ನೀನು ನಮಗಿತ್ತ ಹೊಸ ಕಲಿಕೆಯ ಅನುಭವಗಳಿಗಾಗಿ ನಿನಗೆ ಸ್ತೋತ್ರವನ್ನು ಸಲ್ಲಿಸುತ್ತೇವೆ. ನಾವು ವಯಸ್ಸಿನಲ್ಲಿ ಮುಂದುವರಿದ ಹಾಗೆ ನಮ್ಮ ಇತಿಮಿತಿಗಳನ್ನರಿತು ಅರ್ಥಮಾಡಿಕೊಂಡು ಬೆಳೆಯುವಂತೆ ಸಹಾಯ ಮಾಡು. ನಮಗೆ ಸಂತೋಷವನ್ನು ಕೊಡುವ ಕುಟುಂಬದಲ್ಲಿ ದೊರೆಯುವ ಗೌರವಕ್ಕಾಗಿಯೂ ಸಮಾಜದಲ್ಲಿ ನಮಗೆ ಸಿಕ್ಕುವ ಮನ್ನಣೆಗಾಗಿಯೂ ನಿನಗೆ ಸ್ತೋತ್ರವನ್ನು ಸಲ್ಲಿಸುತ್ತೇವೆ.

ಕೆಲವು ಸಮಯಗಳಲ್ಲಿ ಕುಟುಂಬ ಮತ್ತು ಸಮಾಜವು ನಮ್ಮನ್ನು ಹೊರೆಯೆಂದು ಪರಿಗಣಿಸಿದೆ. ಅಗೌರವದಿಂದ ಕಂಡಿದೆ; ಆದರೆ ಅದೇ ವೇಳೆ ನಮ್ಮ ಈಗಿನ ಯುವಜನರು ಅದರಲ್ಲಿಯೂ ನಮ್ಮ ಮಕ್ಕಳು ಸಮಾಜದಲ್ಲಿ ಅಂತ ಜವಾಬ್ದಾರಿಯ ನಾಗರೀಕರಾಗಿರುವುದನ್ನು ನೋಡಿ ನಾವು ಸಂತೋಷಿಸುತ್ತೇವೆ.

ನಮ್ಮ ಮೇಲೆ ನಿನಗಿರುವ ಕೃಪಾ–ಕರುಣೆಯನ್ನು ಕುರಿತು ಅವಲೋಕನ ಮಾಡುವ ಸಮಯಕ್ಕಾಗಿ ನಿನಗೆ ಸ್ತೋತ್ರವನ್ನು ಸಲ್ಲಿಸುತ್ತೇವೆ. ನಮ್ಮ ಇಳಿ ವಯಸ್ಸಿನಲ್ಲಿ ಬರುವ ಸಮಸ್ಯೆಗಳ ನಡುವೆಯೂ ನಿನ್ನ ನಿತ್ಯ–ನಿರಂತರ ಪ್ರಸನ್ನತೆಯನ್ನು ಅನುಭವಿಸಲು ಸಹಾಯ ಮಾಡು. ನಿನ್ನ ಮಗನೂ ನಮ್ಮ ಕರ್ತನೂ ಆಗಿರುವ ಯೇಸು ಕ್ರಿಸ್ತನ ಮಧುರ ನಾಮದಲ್ಲಿ ಬೇಡುತ್ತೇವೆ.

ಆಮೆನ್.

ತಂದೆ./ತಾಯಿಯೊಬ್ಬರಿಂದ

ಕೃಪಾಳುವಾದ ದೇವರೇ, ತಂದೆತಾಯಿಗಳು ನಮಗೆ ನೀನು ಕೊಟ್ಟಂಥ ವರದಾನ. ಅಂತೆಯೇ ನಮ್ಮನ್ನು ಅವರಿಗೆ ನೀನು ವರವಾಗಿ ಕೊಟ್ಟಿದ್ದೀ. ನಾವು ನಮ್ಮ ತಂದೆತಾಯಿಗಳನ್ನು ಆಯ್ಕೆಮಾಡಲಿಲ್ಲ ಬದಲಾಗಿ ಅವರು ನಿನ್ನಿಂದ ನಮಗೆ ಕೊಡಲ್ಪಟ್ಟವರು. ಕೆಲವೊಮ್ಮೆ ನಮ್ಮ ತಂದೆತಾಯಿಗಳ ವಿಷಯದಲ್ಲಿ ನಮಗೆ ಸಂತೋಷವಿಲ್ಲದ ದಿನಗಳಿದ್ದವು, ಹಾಗೆಯೇ ಅವರಿಗೆ ನಮ್ಮ ವಿಷಯದಲ್ಲಿ ಸಂತೋಷವಿಲ್ಲದ ದಿನಗಳಿದ್ದವು. ಆದಾಗ್ಯೂ ನಾವು ಪರಸ್ಪರರ ಪ್ರೀತಿಯಲ್ಲಿ ಆನಂದಿಸುತ್ತಿದ್ದೇವೆ. ಅವರು ಕೋಪಿಸಿಕೊಂಡ ಗಳಿಗೆಗಳಿದ್ದಾಗ್ಯೂ ನಮ್ಮನ್ನು ಅವರು ಪ್ರೀತಿಸಿದ್ದಾರೆ. ಅವರು ಹಸಿದಿದ್ದ ಗಳಿಗೆಗಳಿದ್ದಾಗ್ಯೂ ನಮಗೆ ಅವರು ಉಣಬಡಿಸಿದ್ದಾರೆ. ನಮ್ಮ ಕಡೆಗವರು ಒರಟಾಗಿದ್ದ ಗಳಿಗೆಗಳಿದ್ದಾಗ್ಯೂ ನಮಗಾಗಿ ಅವರು ಚಿಂತೆಮಾಡಿದ್ದಾರೆ. ನಾವು ಮಾಡಿದ ಪ್ರತಿಯೊಂದನ್ನು ಅವರು ಟೀಕಿಸಿದ ಗಳಿಗೆಗಳಿದ್ದಾಗ್ಯೂ ನಾವು ಉನ್ನತಿಗೆ ಬರಲು ಅವರು ಸಹಾಯ ಮಾಡಿದ್ದಾರೆ.

ನಮ್ಮ ಕಡೆಗವರು ಕಾವಲಾಗಿದ್ದ ಗಳಿಗೆಗಳಿದ್ದಾಗ್ಯೂ ನಾವು ಸ್ವತಂತ್ರರಾಗುವಂತೆ ನಮ್ಮನ್ನು ಪ್ರೋತ್ಸಾಹಿಸಿದ್ದಾರೆ ನಮ್ಮ ತಂದೆ ತಾಯಿಯರೊಂದಿಗೆ ನಾವು ಅನುಭವಿಸಿದ ನೆಮ್ಮದಿ ಮತ್ತು ಭರವಸೆಗಾಗಿ ಕರ್ತನೇ ನಿನಗೆ ಸ್ತೋತ್ರ. ನಮಗಾಗಿ ಅವರು ಮಾಡಿದ ತ್ಯಾಗಗಳನ್ನು ನಾವು ಸದಾ ಸ್ಮರಿಸುವವರೂ, ನಾವು ಅವರಿಗಾಗಿ ಮಾಡುವದರಲ್ಲೆಲ್ಲಾ ಅವರನ್ನು ಗೌರವಿಸುವವರೂ ಆಗಿರುವಂತೆ ನಮಗೆ ದಯಪಾಲಿಸು. ಹೀಗೆಂದು ನಿನ್ನ ಕುಮಾರನೂ ನಮ್ಮ ಕರ್ತನೂ ರಕ್ಷಕನೂ ಆದ ಯೇಸು ಕ್ರಿಸ್ತನ ಮಧುರ ನಾಮದಲ್ಲಿ ಬೇಡಿಕೊಳ್ಳುತ್ತೇವೆ. ಆಮೆನ್.

ಮೊಮ್ಮಕ್ಕಳೊಬ್ಬರಿಂದ :

ಪ್ರೀತಿಯುಳ್ಳ ದೇವರೇ, ನಮಗೆ ಕೊಟ್ಟಂತ ಅಜ್ಜಿ – ತಾತಂದಿರಿಗಾಗಿ ಅವರಜೀವನದಲ್ಲಿಯ ಅವರ ಸಾಧನೆಗಳಿಗಾಗಿ ಹಾಗೂ ಶಿಸ್ತಿನಿಂದ ಕೂಡಿದ ಜೀವಿತಕ್ಕಾಗಿ ಮತ್ತು ಕುಟುಂಬಕ್ಕೆ ಅವರು ಬದ್ಧರಾಗಿದ್ದದಕ್ಕಾಗಿ ನಿನಗೆ ಸ್ತೋತ್ರ. ನಮಗೆ ಕೊಟ್ಟ ಅಮೂಲ್ಯ ಅಜ್ಜಿ – ತಾತಂದಿರಿಗಾಗಿ ನಾವು ನಿನ್ನನ್ನು ವಂದಿಸುತ್ತೇವೆ. ನಮ್ಮ ತಂದೆ ತಾಯಿಯರು ತಮ್ಮ ಕೆಲಸದಲ್ಲಿ ನಿರತರಾಗಿದ್ದಾಗ ಅಜ್ಜಿ ತಾತಂದಿರು ನಮ್ಮನ್ನು ನೋಡಿಕೊಳ್ಳುತ್ತಾರೆ. ಅವರು ದೈಹಿಕವಾಗಿ ನಿಶ್ಯಕ್ತರಾದರೂ, ಅವರಿಗೆ ಅನಾರೋಗ್ಯವಿದ್ದರೂ ನಮ್ಮನ್ನು ಪರಿಪಾಲನೆ ಮಾಡುತ್ತಿದ್ದಾರೆ. ನಮ್ಮ ಸಂಸ್ಕೃತಿ ಹಾಗೂ ತಮ್ಮ ಅನುಭವಗಳ ಜ್ಞಾನವನ್ನು ಅವರು ನಮ್ಮೊಂದಿಗೆ ಹಂಚಿಕೊಳ್ಳುತ್ತಾರೆ. ನಾವು ಹೇಗೆ ಬಾಳಬೇಕೆಂದು ನಮಗವರು ಕಲಿಸುತ್ತಾರೆ. ಜೀವನದ ಅಮೂಲ್ಯ ಸಂಗತಿಗಳ ಬಗ್ಗೆ ನಮಗೆ ತಿಳಿಹೇಳಿ ಸಮಾಜ ಹಾಗೂ ಸಂಸ್ಕೃತಿಗಳ ಬಗ್ಗೆ ಮಾಹಿತಿ ನಮಗೆ ನೀಡುತ್ತಾರೆ. ಕುಟುಂಬದಲ್ಲಿ ನಾವು ಆನಂದಿಸುವಂತೆ ನಮಗೆ ಸಹಾಯ ಮಾಡುತ್ತಾರೆ. ನಮ್ಮನ್ನು ನೋಡಬೇಕೆಂದು ಅವರು ಕಾತುರರಾಗಿರುತ್ತಾರೆ. ತಮ್ಮಲ್ಲಿರುವುದನ್ನೂ ತಮ್ಮ ಕೈಲಾದದ್ದನ್ನೂ ನಮಗೆ ಕೊಡುತ್ತಾರೆ. ಅವರ ಬೆಲೆಯನ್ನು ನಾವು ಅರಿಯದೆ ಅನೇಕಾವರ್ತಿ ಅವರಿಗೆ ಅಗೌರವವನ್ನು ತೋರಿದ್ದೇವೆ. ಆದಾಗ್ಯೂ ಅವರು ನಮ್ಮನ್ನು ಪ್ರೀತಿಸುತ್ತಾರೆ. ಅವರ ತಾಳ್ಮೆ ಹಾಗೂ ಸಹನೆಗಾಗಿ ಕರ್ತನೇ, ನಿನಗೆ ಸ್ತೋತ್ರ. ನಮ್ಮೊಟ್ಟಿಗೆ ಮಾತನಾಡಲು, ನಮ್ಮ ಅನುಭವಗಳನ್ನು, ನಾವು ಕಲಿತವುಗಳನ್ನು ಅವರೊಂದಿಗೆ

ಹಂಚಿಕೊಳ್ಳಬೇಕೆಂದು ಅವರು ನಿರೀಕ್ಷಿಸುತ್ತಾರೆ. ಆದರೆ ಅವರೊಂದಿಗೆ ಮಾತನಾಡುವ ಇಲ್ಲವೆ ಹಂಚಿಕೊಳ್ಳುವ ಸಮಯ ನಮಗಿಲ್ಲ. ನಮ್ಮ ಸ್ವಲ್ಪ ಸಮಯವನ್ನು ಅವರೊಂದಿಗೆ ಕಳೆದರೆ ಅವರಿಗೆಷ್ಟೋ ಸಂತೋಷವಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವಲ್ಲಿ ನಾವು ಬಿದ್ದು ಹೋಗಿದ್ದೇವೆ. ಅವರ ಅಗತ್ಯತೆ, ಬಯಕೆಗಳನ್ನು ಅರಿತುಕೊಂಡು ನಮ್ಮ ಅಜ್ಜಿ – ತಾತಂದಿರಿಗೆ ಮಾತ್ರವಲ್ಲ ಇತರ ಹಿರಿಯರಿಗೂ ಸಹಾಯಮಾಡುವವರು ನಾವಾಗುವಂತೆ ಮಾಡೆಂದು ನಿನ್ನ ಕುಮಾರನೂ ನಮ್ಮ ಕರ್ತನು ಆದ ಯೇಸು ಕ್ರಿಸ್ತನ ಮಧುರ ನಾಮದಲ್ಲಿ ಬೇಡಿಕೊಳ್ಳುತ್ತೇವೆ. ಆಮೆನ್.

ಪಾಪದರಿಕೆ ಕರೆ:

ಪಾಲಕ : ನಮ್ಮನ್ನು ಯಾವಾಗಲೂ ಕ್ಷಮಿಸಿ ನಮ್ಮನ್ನು ನೂತನಪಡಿಸಲು ಸಿದ್ಧನಿರುವ ದೇವರಿಗೆ ನಮ್ಮ ನ್ಯೂನ್ಯತೆ ಮತ್ತು ಬಲಹೀನತೆಗಳನ್ನು ದೀನತೆಯಿಂದ ಅರಿಕೆಮಾಡುವ ಸಮಯ ಇದಾಗಿದೆ. ಆದುದರಿಂದ ಕ್ಷಣಕಾಲ ಮೌನವಾಗಿದ್ದು ನಾವು ದೇವರಿಂದಲೂ ನಮ್ಮ ನೆರೆಯವರಿಂದಲೂ ದೂರಹೋದ ದಿನಗಳನ್ನು ನೆನಪುಮಾಡಿಕೊಳ್ಳೋಣ.

ಸಭೆ : (ಹಾಡುವುದು) ಬನ್ನಿ ಪಶ್ಚಾತ್ತಾಪದಿಂದ.....

ಎಲ್ಲರೂ : ನಮ್ಮ ಹಿರಿಯರ ಕಡೆಗೆ ತಾಳ್ಮೆಯಿಲ್ಲದವರಾಗಿ, ಸಹನೆ ಇಲ್ಲದೆ ನಡೆದುಕೊಂಡದ್ದು ಮಾತ್ರವೇ ಅಲ್ಲ ಅವರೊಂದಿಗೆ ಗುಣಮಟ್ಟದ ಸಮಯವನ್ನು ಕಳೆಯುವಲ್ಲಿ ವಿಫಲರಾಗಿರುವ ನಮ್ಮನ್ನು ಕ್ಷಮಿಸು ಕರ್ತನೇ,

(ಮೌನ)

ಎಲ್ಲರೂ : ನಮ್ಮ ಹಿರಿಯರಿಗೆ ದಯೆತೋರದೆ, ಅವರ ತ್ಯಾಗವನ್ನು ಶ್ಲಾಘಿಸದೆ, ನಮ್ಮ ಭವಿಷ್ಯವನ್ನು ಅವರು ನೀಡಿದ ಪ್ರೀತಿಪೂರ್ವಕ ಕೊಡುಗೆಗಳನ್ನು ಗೌರವಿಸುವಲ್ಲಿನ ನಮ್ಮ ವಿಫಲತೆಯನ್ನು ಕ್ಷಮಿಸು ಕರ್ತನೇ,

(ಮೌನ)

ಎಲ್ಲರೂ : ನಮ್ಮ ಹಿರಿಯರ ಕುಟುಂಬದ ಬಲಹೀನ ಮಕ್ಕಳಿಗೆ ಹೆಚ್ಚಿನ ಪೋಷಣೆ ನೀಡಿದಾಗ ಅವರನ್ನು ಅರ್ಥಮಾಡಿಕೊಳ್ಳದೆ ಅವರು ಭೇದಭಾವ ತೋರಿದ್ದಾರೆಂದು ಆಕ್ಷೇಪ ಮಾಡಿದ ನಮ್ಮ ಬಲಹೀನತೆಯನ್ನು ಕ್ಷಮಿಸು ಕರ್ತನೇ,

(ಮೌನ)

ಎಲ್ಲರೂ : ನಾವು ಹಿರಿಯರ ಸ್ವಾರ್ಥಪರರಾಗಿ ನಮ್ಮ ಭವಿಷ್ಯ ಮತ್ತು ಸೌಖ್ಯಗಳಲ್ಲೇ ನಿರತರಾಗಿ ನಮ್ಮ ಹಿರಿಯರ ಜೀವಿತವು ಕೊನೆಗೊಂಡಿದೆ ಎಂದು ಪರಿಗಣಿಸಿದ ನಮ್ಮ ಮನೋಭಾವನೆಗಳನ್ನು ಕ್ಷಮಿಸು ಕರ್ತನೇ,

(ಮೌನ)

ಎಲ್ಲರೂ : ನಾವವರ ಮಕ್ಕಳಾಗಿ ಹಿರಿಯರಾದ ಅವರಿಗೆ ನಮ್ಮ ಅವಶ್ಯಕತೆ ಇರುವ ಸಮಯದಲ್ಲಿ ಅವರನ್ನು

ತೊರೆದು ಬಿಟ್ಟಿರುವ ನಮ್ಮ ಬೇಜವಾಬ್ದಾರಿಯನ್ನು ಕ್ಷಮಿಸು ಕರ್ತನೇ,

ಸಭೆ : (ಹಾಡುವುದು) ಆದಿ ಕರ್ತ ಕ್ರಿಸ್ತನೇ.....

ಪಾಪಕ್ಷಮಾಪಣೆಯ ಭರವಸೆಯ ಪ್ರಾರ್ಥನೆ.

ಪಾಲಕ : ಕುಟುಂಬ ನಿರ್ಮಾಣಿಕನಾದ ಸರ್ವಶಕ್ತನಾದ ದೇವರು ನಮ್ಮಲ್ಲಿನ ಹಿರಿಯರಿಗೆ ಸಲ್ಲಬೇಕಾದ ಗೌರವ ಹಾಗೂ ಘನತೆಯನ್ನು ಎತ್ತಿಹಿಡಿಯುವಲ್ಲಿನ ನಮ್ಮ ವಿಫಲತೆಯನ್ನು ಮನ್ನಿಸಿ ನಮಗೆ ಕ್ಷಮಾಪಣೆಯನ್ನು ದಯಪಾಲಿಸಲಿ. ನಮ್ಮ ಹಿರಿಯರ ಮಮತೆ, ಪ್ರೀತಿ ಚಿಂತನೆಗಳಿಗೆ ಪ್ರತಿಯಾಗಿ ನಾವೂ ಅವರಿಗೆ ಅವುಗಳನ್ನೇ ತೋರುವವರಾಗುವಂತೆ ನಮ್ಮ ಮನಸ್ಸಾಕ್ಷಿಯನ್ನು ಬೆಳಗಿಸಲೆಂದು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಬೇಡಿಕೊಳ್ಳುತ್ತೇವೆ. ಆಮೆನ್.

ಪಾಲಕ : ಕರ್ತನು ನಿಮ್ಮೊಂದಿಗಿರಲಿ.

ಸಭೆ : ನಿನ್ನಾತ್ಮದೊಂದಿಗೂ ಇರಲಿ.

ಸಂಗ್ರಹ ಪ್ರಾರ್ಥನೆ:

ಪಾಲಕ : ನಿತ್ಯನಾದ ದೇವಾ, ನಮಗೆ ವಯಸ್ಸಾದಾಗಲೂ ನಮಗೆ ಕೆಲಸಮಾಡಲು ತ್ರಾಣವಿಲ್ಲ ದಿರುವಾಗಲೂ ನಮ್ಮ ಮೆಲಿನ ನಿನ್ನ ಪ್ರೀತಿ ಎಂದಿಗೂ ನಂದಿಹೋಗದು. ಕ್ರಿಸ್ತ ಯೇಸುವಿನಲ್ಲಿ ಹಿರಿಕಿರಿಯರ ಅನ್ಯೋನ್ಯತೆಯಿಂದಲೂ ಹಿರಿಯರ ಆಶೀರ್ವಾದಗಳಿಂದಲೂ ನಮ್ಮ ಸಮಾಜದ ಜೀವಿತವನ್ನು ಐಶ್ವರ್ಯಭರಿತವಾಗಿ ಮಾಡು. ಸಭೆಯು ಹಿರಿಯರಿಗೆ ಪರಾಮರಿಕೆಯ ಸಾಧನವಾಗುವಂತೆ ಮಾಡೆಂದು ನಿನ್ನೊಂದಿಗೂ ಪವಿತ್ರಾತ್ಮನೊಂದಿಗೂ ಕೂಡಿ ಏಕ ದೇವರಾಗಿ ಸದಾ ಜೀವಿಸಿ ಆಳುವ ಯೇಸು ಕ್ರಿಸ್ತನ ಮೂಲಕ ಬೇಡಿಕೊಳ್ಳುತ್ತೇವೆ. ಆಮೆನ್.

ಸಭೆ : (ಹಾಡುವುದು) ಪರಿಶುದ್ಧ ಮಹೋನ್ನತ

ಸತ್ಯವೇದ ಪಾರಾಯಣ : ಹಳೇ ಒಡಂಬಡಿಕೆ – ಆದಿಕಾಂಡ : 24:1–14

ಪತ್ರಿಕಾ ಭಾಗ : 2 ತಿಮೋಥಿ 1:3–14

ವಿಶೇಷಗೀತೆ

ಸುವಾರ್ತಾಭಾಗ : ಲೂಕ 1:5–7

ದೈವಸಂದೇಶ:

ಸಭಾಪ್ರಕಟಣೆ :

ಕಾಣಿಕೆ ಸಂಗ್ರಹ : 27

ಪರಾರ್ಥ ಪ್ರಾರ್ಥನೆ :

ನಾಯಕ: ಕೃಪಾಳು ದೇವರೇ, ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಗಳಿಗೆ ಬಲಿಪಶುಗಳಾಗುತ್ತಿರುವ ನಮ್ಮ ಹಿರಿಯರನ್ನು ನಿನ್ನ ಮುಂದೆ ನೆನಪು ಮಾಡಿಕೊಳ್ಳುತ್ತೇವೆ.

ಸಭೆ : ಓ ಪ್ರಭುವೇ, ಅವರನ್ನು ಆದರಿಸಿ ಪೋಷಿಸು ಹಾಗೂ ನಾವು ಅವರ ಅಗತ್ಯತೆಗಳಿಗೆ ಸ್ಪಂದಿಸಲು ನಮಗೆ ಸಹಾಯ ನೀಡು.

ನಾಯಕ : ಕೃಪಾಳು ದೇವರೇ, ಬಡವರನ್ನೂ ಕೈ ಬಿಡಲ್ಪಟ್ಟ ಹಿರಿಯರನ್ನೂ ನಿನ್ನ ಮುಂದೆ ನೆನಪುಮಾಡಿಕೊಳ್ಳುತ್ತೇವೆ.

ಸಭೆ : ಓ ಪ್ರಭುವೇ, ಅವರನ್ನು ಆದರಿಸಿ ಪೋಷಿಸು ಹಾಗೂ ನಾವು ಅವರ ಅಗತ್ಯತೆಗಳಿಗೆ ಸ್ಪಂದಿಸಲು ನಮಗೆ ಸಹಾಯ ನೀಡು.

ನಾಯಕ: ಓ ದೇವರೇ, ಇಳಿ ವಯಸ್ಸಿನ ಸಹಜ ಬಲಹೀನತೆಗಳಿಗೆ ಒಳಗಾದವರ ಮತ್ತು ಒಂಟಿಗರಾಗಿ ಜೀವಿಸುವ ನಮ್ಮ ಹಿರಿಯರ ಸೇವೆಯನ್ನು ಮಾಡಲು ನಮ್ಮ ಸಭಾಪ್ರಾಂತದ ಹಿರಿಯರ ಪರಾಂಬರಿಕೆಯ ವಿಭಾಗದ ಮೂಲಕವಾಗಿ ನೀನು ನಮಗಿತ್ತ ಅವಕಾಶಗಳನ್ನು ನೆನೆದು ನಿನಗೆ ಸ್ತೋತ್ರವನ್ನು ಸಲ್ಲಿಸುತ್ತೇವೆ.

ಕೃಪಾಳು ದೇವರೇ, ಬಡವರ ಮತ್ತು ಬಲಹೀನರನ್ನು ಪೋಷಿಸುತ್ತಿರುವ ಬೆಂಗಳೂರಿನ ಸೈಂಟ್ ಜಾನ್ಸ್ ಚರ್ಚ್‌ನ ಯೋಜನೆಯಲ್ಲಿ ಬರುವ ಸ್ಟೀಫನ್ಸ್ ಹೋಂ, ಕರ್ನಾಟಕ ಮಧ್ಯ ಸಭಾಪ್ರಾಂತದಡಿಯಲ್ಲಿ ಬರುವ ಚನ್ನಪಟ್ಟಣದ ಭೆಥನಿ ಆಶ್ರಮ ಹಾಗೂ ಇತರೆ ಸಂಸ್ಥೆಗಳನ್ನು ನಡೆಸಲು ಸಹಾಯ ನೀಡುತ್ತಿರುವವರನ್ನು ನಿನ್ನ ಸನ್ನಿಧಿಯಲ್ಲಿ ನೆನಪುಮಾಡಿಕೊಳ್ಳುತ್ತೇವೆ. ಹಿರಿಯರ ಬಗ್ಗೆ ಕಳಕಳಿಯನ್ನು ತೋರುತ್ತಾ ಅನೇಕ ಸಭೆಗಳು ಕೈಗೊಂಡಿರುವ ಈ ಕೆಳಕಂಡ ಆಶ್ರಯ ನಿವಾಸಗಳನ್ನು ನೆನಪು ಮಾಡಿಕೊಳ್ಳುತ್ತೇವೆ. ವೆಸ್ಲಿ ಇಂಗ್ಲೀಷ್ ಚರ್ಚ್, ಸೈಂಟ್ ಮಾರ್ಕ್ಸ್ ಕಥೀಡ್ರಲ್, ಆಲ್ ಸೈಂಟ್ಸ್ ಚರ್ಚ್, ಟ್ರಿನಿಟಿ ಹೋಂ (ಕೆ.ಸಿ.ಡಿ.) ಆಶಾ ನಿವಾಸ ಮತ್ತು ಸೈಂಟ್ ಸ್ಟೀಫನ್ಸ್‌ಹೋಮ್ (ಸೇಂಟ್ ಜಾನ್ಸ ಚರ್ಚ್ ಯೋಜನೆಯಡಿಯಲ್ಲಿ) ಮತ್ತು ಇತರ ಸಭೆಗಳು ಇನ್ನೂ ಆಸಕ್ತಿಯಿಂದ ಹಿರಿಯರೆಡೆಗೆ ಆಧ್ಯತೆಯನ್ನು ನೀಡಿ ತಮ್ಮ ಸೇವೆಯಲ್ಲಿ ನಿರತರಾಗುವಂತೆ ಮಾಡೆಂದು ಬೇಡಿಕೊಳ್ಳುತ್ತೇವೆ.

ಸಭೆ : ಓ ಪ್ರಭುವೇ, ಅವರನ್ನು ಆದರಿಸಿ ಪೋಷಿಸು ಹಾಗೂ ನಾವು ಅವರ ಅಗತ್ಯತೆಗಳಿಗೆ ಸ್ಪಂದಿಸಲು ನಮಗೆ ಸಹಾಯ ನೀಡು.

ನಾಯಕ: ಕೃಪಾಳು ದೇವರೇ, ಸಿ. ಎಸ್. ಐ ಆಸ್ಪತ್ರೆಯ ಮೂಲಕ ಹಿರಿಯರಿಗಾಗಿ ನಡೆಸುತ್ತಿರುವ ಸೇವೆಯನ್ನು ಮತ್ತು ಇತರೆ ಸ್ಥಳಗಳಲ್ಲಿಯೂ ಸಭೆಗಳಲ್ಲಿಯೂ ನಡೆಸುತ್ತಲಿರುವ ಸೇವೆಯನ್ನು ನೆನಪುಮಾಡಿಕೊಳ್ಳುತ್ತೇವೆ.

ಸಭೆ : ಓ ಪ್ರಭುವೇ, ಅವರನ್ನು ಆದರಿಸಿ ಪೋಷಿಸು ಹಾಗೂ ನಾವು ಅವರ ಆಗತ್ಯತೆಗಳಿಗೆ ಸ್ಪಂದಿಸಲು ನಮಗೆ ಸಹಾಯ ನೀಡು.

ನಾಯಕ: ಹಿರಿಯರಿಗೆ ಸಂತೋಷ, ಸಮಾಧಾನ, ಮತ್ತು ಆರಾಮದಾಯಕವಾದ ವಾತಾವರಣಗಳನ್ನು, ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸುತ್ತಿರುವ, ಕೈಸ್ತ ಮತ್ತು ಕ್ರೈಸ್ತೇತರ, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳನ್ನೂ ಗುಂಪುಗಳನ್ನೂ ವ್ಯಕ್ತಿಗಳನ್ನೂ ನಿನ್ನ ಮುಂದೆ ನೆನಪು ಮಾಡಿಕೊಳ್ಳುತ್ತೇವೆ.

ಸಭೆ : ಓ ಪ್ರಭುವೇ, ಅವರನ್ನು ಆಧರಿಸಿ ಪೋಷಿಸು ಹಾಗೂ ನಾವು ಅವರ ಅಗತ್ಯತೆಗಳಿಗೆ ಸ್ಪಂದಿಸಲು ನಮಗೆ ಸಹಾಯ ನೀಡು. ಆಮೆನ್

ಮುಕ್ತಾಯ ಸಂಗೀತ : 135

ಕರ್ತನ ಪ್ರಾರ್ಥನೆ :

ಅಂತ್ಯಾಶೀರ್ವಾದ :

ನಿಮ್ಮೆಲ್ಲರಿಗೂ ಹಿರಿಯ ನಾಗರೀಕರ ಭಾನುವಾರದ ಶುಭಾಶಯಗಳು

ಸಭಾಪಾಲಕರು ಮತ್ತು ಸಭಾಪಾಲನಾ ಸಮಿತಿಯ ಸದಸ್ಯರು